ನಿಮಗೆ ಇಷ್ಟವಾಗುತ್ತದೆ. 'ಎಲ್ ಮನಾನ' ಕಾದಂಬರಿಯನ್ನು ನೀವು ಹಲವು ಸ್ತರಗಳಲ್ಲಿ ಹರಡಿಕೊಂಡಿರುವ ಭಾಷೆಯ ಥ್ರಿಲ್ಲರ್ ಎಂದು ಹೇಳಬಹುದು. ಏಕೆಂದರೆ ಅದು ಹತ್ತಾರು ಊಹೆ–ಅರ್ಥಗಳನ್ನು ಹೊಂದಿರುವಂತಹದ್ದು; ನೇರಾನೇರ ಉತ್ತರಗಳನ್ನೋ ಅರ್ಥಗಳನ್ನೋ ಅಲ್ಲಿ ಕಾಣಲು ಸಾಧ್ಯವಿಲ್ಲ.

◆ **ಪೆರುಂದೇವಿ: ಒಂದು ಸಂದರ್ಶನದಲ್ಲಿ ನೀವು 'ನಾನೊಬ್ಬ ಹುಟ್ಟು ಸ್ತ್ರೀವಾದಿ, ಹಟ ಸ್ತ್ರೀವಾದಿಯಲ್ಲ' ಎಂದಿದ್ದೀರಿ. ಈ ಎರಡರ ನಡುವಿನ ವ್ಯತ್ಯಾಸಗಳನ್ನು ಮತ್ತಷ್ಟು ವಿವರಿಸಲು ಸಾಧ್ಯವೇ? ಹುಟ್ಟು ಸ್ತ್ರೀವಾದಿಯಾಗಿರುವುದು ಮತ್ತು ಹಟ ಸ್ತ್ರೀವಾದಿಯಾಗಿಲ್ಲದಿರುವ ಕಾರಣಗಳೇ ನಿಮಗೆ ಬಹುಸ್ತರೀಯ ಆಯಾಮಗಳ (ಏಮ್ಮುಖ ಅಸ್ಮಿತೆಯಿಂದ ಹೊರತಾದ) ಬರಹಗಳನ್ನು ಸೃಜಿಸಲು ಸಹಕಾರ ಮಾಡಿದವೇ?**

ಹೌದು, ಹಾಗೆಂದೇ ಭಾವಿಸುತ್ತೇನೆ. 'ಪೊಲಿಟಿಕಲಿ ಕರೆಕ್ಟ್' ಎಂಬ ಹೇರಿಕೆಯ ನಿಲುವಿನಾಚೆ ನಿಂತು ಒಂದು ಸೃಜನಶೀಲ ಬರಹವನ್ನು ನಾವು ಓದಬೇಕಿದೆ, ಇಲ್ಲಿ ಸ್ವತಂತ್ರ ಎಂಬ ಪದ ಬಹು ಮುಖ್ಯವಾದುದು. ನಾನು ಎಂದೆಂದಿಗೂ ಸ್ವತಂತ್ರ ಚಿಂತನಾಶೀಲ ವ್ಯಕ್ತಿಯಾಗಿಯೇ ಇದ್ದೇನೆ; ರಾಜಕೀಯ ನೆಲೆಯಲ್ಲೂ ಹಾಗೆಯೇ ಇದ್ದೇನೆ. ಆ ಕಾರಣದಿಂದ ನಾಲ್ಕಾರು ಸಮಸ್ಯೆಗಳಲ್ಲಿ ಸಿಕ್ಕಿಹಾಕಿಕೊಂಡಿದ್ದೂ ಇದೆ. ನನ್ನನ್ನು ಬೆಂಬಲಿಸುವ ಯಾವ ರಾಜಕೀಯ ಪಕ್ಷಗಳಿಲ್ಲದಿದ್ದರೂ ನಾನು ಕೆಲವೊಮ್ಮೆ ಸಂದಿಗ್ಧ ಪರಿಸ್ಥಿತಿಗಳನ್ನು ಎದುರಿಸಿ ನಿಂತಿದ್ದೇನೆ. ಆದರೆ, ಒಂದು ರೀತಿಯಲ್ಲಿ ನನಗೆ ಅದೃಷ್ಟ ಇತ್ತೆಂದೇ ಹೇಳಬಹುದು, ದುರಂತ ಘಟನೆಗಳು ಯಾವುವೂ ಸಂಭವಿಸಲಿಲ್ಲ. ಹಾಗೆಂದು ನಾನು ಹೆಣ್ಣಿನ ಹಕ್ಕುಗಳ ಕುರಿತಾದ ನನ್ನ ದನಿಯನ್ನು, ಹೋರಾಟಗಳನ್ನು ಎಂದೂ ಕೈ ಬಿಟ್ಟಿಲ್ಲ. ನನ್ನೊಳಗೆ ಆ ಹೋರಾಟಗಳು ಆಳವಾಗಿ ಬೇರೂರಿವೆ. ಕೆಲವರು ನನ್ನನ್ನು 'ಸ್ತ್ರೀವಾದಿ ಬರಹಗಾರ್ತಿ' ಎಂದು ಕರೆಯುವುದನ್ನು ನಾನು ನಿರಾಕರಿಸುತ್ತಲೇ ಬಂದಿದ್ದೇನೆ. ಸ್ವ–ಶೋಧದ ಬರಹಗಾರರಾಗಿದ್ದಲ್ಲಿ, ನೀವು ಆಳವಾಗಿ ನಂಬುವ ವಿಚಾರಗಳು ನಿಮ್ಮ ಬರಹಗಳಲ್ಲಿ ಸಹಜವಾಗಿಯೇ ಅಭಿವ್ಯಕ್ತಗೊಳ್ಳುತ್ತವೆ.

◆ **ಕನಕರಾಜ್: ಬರಹಗಳ ಮುಖೇನ ನೀವು ವಾಸ್ತವದ ಹಲವು ಸ್ತರಗಳನ್ನು, ನೋಟಗಳನ್ನು ಪ್ರಸ್ತುತಪಡಿಸುತ್ತೀರಿ. 1960–70ರಲ್ಲಿ ಘಟಿಸಿದ ಲ್ಯಾಟಿನ್ ಅಮೆರಿಕನ್ ಸಾಹಿತ್ಯದ ಬಿರುಗಾಳಿ, ಹಾಗೆಯೇ ಅದರ ನಂತರದ ಕಾಲಘಟ್ಟದ ಗುರುತುಗಳನ್ನು (Boom and Post–Boom literary movement in the Latin American literature) ನಿಮ್ಮ ಕೃತಿಗಳಲ್ಲಿ ಕಾಣಬಹುದಾಗಿದೆ. ಅರ್ಜೆಂಟೈನಾ ಮಿಲಿಟರಿ ನಡೆಸಿದ 'ಡರ್ಟಿ ವಾರ್' ಸಂದರ್ಭದಲ್ಲಿ ನೀವು ಬರೆದ ಕಥೆಗಳು ಇದಕ್ಕೊಂದು ಮುಖ್ಯ ಉದಾಹರಣೆ. ಲ್ಯಾಟಿನ್ ಅಮೆರಿಕದಲ್ಲಿ ನಡೆದ ಈ ಎಲ್ಲಾ ಸಾಮಾಜಿಕ, ಸಾಂಸ್ಕೃತಿಕ ಬೆಳವಣಿಗೆಗಳು ನಿಮ್ಮ ಬರಹಗಳಲ್ಲಿ ಇವೆ ಎಂಬುದನ್ನು ಒಪ್ಪಿಕೊಳ್ಳುವಿರಾ?**

ಎಲ್ಲರ ಹಾಗೆ ನಾನೂ ಕಾಲದ ಶಿಶು. ಓದಿದ್ದು, ಅನುಭವಿಸಿದ್ದು, ಗ್ರಹಿಸಿದ್ದು, ಕಂಡಿದ್ದು, ಕೇಳಿದ್ದು, ಯೋಚಿಸಿದ್ದು – ಹೀಗೆ ನನಗಿಂತ ಮುಂಚೆ ಇಲ್ಲಿ ಇದ್ದ ಎಲ್ಲಾ ಸಂಗತಿಗಳ ಒಟ್ಟು ಮೊತ್ತವೇ ನಾನು. ನಿಮ್ಮೀ ಪ್ರಶ್ನೆಗೆ ಹೌದೆಂದೂ ಇಲ್ಲವೆಂದೂ ಎರಡೂ ಬಗೆಯ ಉತ್ತರವನ್ನೂ ನೀಡಬಹುದು. ಲ್ಯಾಟಿನ್ ಅಮೆರಿಕನ್ ಬೂಮ್ ಎಂಬ ಸಾಹಿತ್ಯದ ಚಳವಳಿಯೊಂದಿಗೆ ಗುರುತಿಸಿಕೊಳ್ಳುವ ಆಸೆ ನನಗೆ ಎಂದಿಗೂ ಇದ್ದಿದ್ದಿಲ್ಲ. ನನ್ನನ್ನು ಇಡಿಯಾಗಿ ಕಾಡಿದ್ದನ್ನು ಅಥವಾ ಬರೆಯಬೇಕು ಎಂದುಕೊಂಡಿದ್ದನ್ನು ಮಾತ್ರ ಇದುವರೆಗೂ ಬರೆಯುತ್ತಾ ಬಂದಿದ್ದೇನೆ. ಅರ್ಜೆಂಟೈನಾದ ಮಿಲಿಟರಿ ಸರ್ವಾಧಿಕಾರಿ ಆಡಳಿತದ ಸಂದರ್ಭದಲ್ಲಿ ಬರೆದ ಬರಹಗಳೇ ಮತ್ತೆಲ್ಲಾ ಬರಹಗಳಿಗಿಂತ, ಬೂಮ್ ಸಾಹಿತ್ಯಕ್ಕಿಂತಲೂ ಅತಿ ಮುಖ್ಯವಾದವು. ಏಕೆಂದರೆ ಅವು ಕಾಲ–ದೇಶಗಳಲ್ಲಿ ಪೂರ್ಣವಾಗಿ ಮುಳುಗಿಹೋದ ಬರಹಗಳು.

◆ **ಪೆರುಂದೇವಿ: ಸಂದರ್ಶನವೊಂದರಲ್ಲಿ ('ಪ್ಯಾರಿಸ್ ರಿವ್ಯೂ' ಸಂಚಿಕೆಯಲ್ಲಿ) ನೀವು ಬೋರ್ಹೆಸ್,**